ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು 2ನೇ ಎದುರುದಾರರ ಪರ ವಕೀಲರಿಂದಃ-

ಮೃತ ವ್ಯಕ್ತಿಯು ನನ್ನ ಗಂಡ ಎಂದು ತೋರಿಸಲು ಆಧಾರ್ ಕಾರ್ಡ್ ಅನ್ನು ಹಾಜರು ಪಡಿಸಿದ್ದೇನೆ. ದಿನಾಂಕ 10.07.2017ರಂದು ಅಪಘಾತ ಆಗಿರುತ್ತದೆ. ಅಪಘಾತವನ್ನು ನಾನು ಕಣ್ಣಾರೆ ನೋಡಿರುವುದಿಲ್ಲ. ದಿನಾಂಕ 10.07.2017 ರಂದು ರಾತ್ರಿ 9.15 ಗಂಟೆಗೆ ಅಪಘಾತವಾಗಿದೆ ಎಂದರೆ ಸರಿ. ಅಪಘಾತ ನೋಡಿ ಹೇಳಿದವರ ಹೆಸರು ನನಗೆ ನೆನಪಿಲ್ಲ. ದೂರನ್ನು ನನ್ನ ತಮ್ಮ ನೀಡಿರುತ್ತಾನೆ, ಆತನ ಹೆಸರು ಮಂಜುನಾಥ್. ಮಂಜುನಾಥ್ ಅಪಘಾತವನ್ನು ನೋಡಿಲ್ಲ. ಅಪಘಾತವು ಹಾರೋಹಳ್ಳಿ ಮತ್ತು ಬಿಡದಿ ರಸ್ತೆ ಮಧ್ಯದಲ್ಲಿ ಆಗಿದೆ ಎಂದರೆ ಸರಿ. ನನ್ನ ಗಂಡ ಮದ್ಯಪಾನ ಮಾಡಿ ರಸ್ತೆಗೆ ಅಡ್ಡ ಬಂದಿರುವುದರಿಂದ ಈ ಅಪಘಾತವಾಗಿದೆ ಎಂದರೆ ಸರಿಯಲ್ಲ. ನಾನು ದೂರು ನೀಡಿರುವ ವಾಹನದಿಂದ ಈ ಅಪಘಾತವಾಗಿಲ್ಲ ಬೇರೆ ಯಾವುದೋ ವಾಹನದಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ಪೋಲಿಸರು ನನ್ನನ್ನಾಗಲಿ ನನ್ನ ತಮ್ಮನನ್ನಾಗಲಿ ಕರೆಯಿಸಿ ಅಪಘಾತ ಪಡಿಸಿದ ವಾಹನವನ್ನು ತೋರಿಸಿದ್ದಾರೆ. ಅಪಘಾತ ಆದ ಸಂದರ್ಭದಲ್ಲಿ ಅಪಘಾತ ಪಡಿಸಿದ ವಾಹನ ಸ್ಥಳದಲ್ಲೆ ಇತ್ತು. ಅಪಘಾತ ಪಡಿಸಿದ ವಾಹನದ ಬಣ್ಣ ನನಗೆ ನೆನಪಿಲ್ಲ ,ನಾನು ಯಾವುದೇ ವಾಹನವನ್ನು ನೋಡಿಲ್ಲದೇ ಇದ್ದರೂ ಕೂಡ ನೋಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾಹನಕ್ಕೆ ಡ್ಯಾಮೇಜ್ ಆಗಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. ಯಾವುದೋ ವಾಹನದಿಂದ ಅಪಘಾತವಾಗಿದೆ ನಾನು ಪೋಲಿಸರ ಜೊತೆ ಶಾಮೀಲಾಗಿ ಒಂದು ದಿನ ತಡವಾಗಿ ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತ ಆದ ನಂತರ ನನ್ನ ಗಂಡನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ನಾನು ಆಸ್ಪತ್ರೆಗೆ ಹೋಗಿ ನನ್ನ ಗಂಡನನ್ನು

ನೋಡಿದಾಗ ನನ್ನ ಗಂಡ ಜೀವಂತವಾಗಿದ್ದರು ನಂತರದಲ್ಲಿ ಆಸ್ಪತ್ರೆಯಲ್ಲಿ ಮರಣ ಹೊಂದಿರುತ್ತಾರೆ. ನನ್ನ ಗಂಡ ಮಾತನಾಡುವ ಪರಿಸ್ಥಿತಿಯಲ್ಲಿ ಇರಲಿಲ್ಲ ಆದ್ದರಿಂದ ಅಪಘಾತದ ಬಗ್ಗೆ ನನ್ನ ಬಳಿ ಏನು ಹೇಳಿರುವುದಿಲ್ಲ ನನ್ನ ಮಕ್ಕಳಲ್ಲಿ ಒಬ್ಬಳು 7 ನೇ ತರಗತಿ ಇನ್ನೊಬ್ಬಳು 2 ನೇ ತರಗತಿ ಓಡುತ್ತಿದ್ದಾರೆ. ಅಪಘಾತ ಆದ 3 ವರ್ಷದ ನಂತರ ಆಧಾರ್ ಕಾರ್ಡ್ ಅನ್ನು ಮಾಡಿಸಿದ್ದೇನೆ ಎಂದರೆ ಸರಿಯಲ್ಲ. ಪರಿಹಾರ ಪಡೆದುಕೊಳ್ಳುವ ಉದ್ದೇಶದಿಂದ ನನ್ನ ಮಕ್ಕಳನ್ನೂ ಕೂಡ ಕೇ,ನಲ್ಲಿ ಸೇಸಿದ್ದೇನೆ ಎಂದರ ಸರಿಯಲ್ಲ , ನನ್ನ ಮಕ್ಕಳ ಶಾಲಾ ದಾಖಲಾತಿಗಳನ್ನು ಹಾಜರು ಪಡಿಸುತ್ತೇನೆ. ನನ್ನ ಯಜಮಾನರಿಗೆ ನಿಪಿ-7 ರಂತೆ ಇ ಎಸ್ ಐ ನಿಂದ ಪೇಸ್ಲಿಪ್ ಕೊಟ್ಟಿದ್ದಾರೆ ಎಂದರೆ ಸರಿ , ನನ್ನ ಗಂಡನಿಗೆ ಇ ಎಸ್ ಐ ಬೆನಿಫಿಟ್ ಇತ್ತು ಎಂದರೆ ಸರಿಯಲ್ಲ. ನನ್ನ ಯಜಮಾನರು ಕೆಲಸ ಮಾಡುತ್ತಿದ್ದ ಅವರ ಮೇಲಾಧಿಕಾರಿಗಳನ್ನು ಸಾಕ್ಷಿಮಾಡಿಸುತ್ತೀರಾ ಎಂದರೆ ಸಾಕ್ಷಿ ಮೊದಲು ಇದ್ದವರು ಈಗ ಇಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನ್ಯಾಯಾಲಯಕ್ಕೋಸ್ಕರ ದಾಖಲಾತಿಗಳನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಜೆರಾಕ್ಸ್ ಕಾಪಿಗಳನ್ನು ಹಾಜರು ಪಡಿಸಿದ್ದೇನೆ ಎಂದರೆ ನಿಜ ಎಂದು ಸಾಕ್ಷಿ ನುಡಿಯುತ್ತಾರೆ. ಆಸ್ಪತ್ರೆಗೆ 75 ಸಾವಿರ ರೂ. ಖರ್ಚು ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಸ್ಪತ್ರೆ ಬಿಲ್ ಗಳನ್ನು ಸೃಷ್ಟಿ ಮಾಡಿ ಹಾಕಲಾಗಿದೆ ಎಂದರೆ ಸರಿಯಲ್ಲ. ನಾನು ಪರಿಹಾರ ಪಡೆದುಕೊಳ್ಳುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ:- ಇಲ್ಲ
(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)
(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ನಿವೇದಿತ ಟಿ.ಎಂ.)
ರಾಮನಗರದ ಮೋಟಾರು ವಾಹನಗಳ ಅಪಘಾತದ
ಪರಿಹಾರಗಳ ಹೆಚ್ಚುವರಿ ನ್ಯಾಯಾ ಮಂಡಳಿಯ
ಪೀಠಾಧಿಕಾರಿಗಳು